## ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ : ವೃ.ಶಿ.ವಿಭಾಗ:ಜಿ.ಹ.ವ.ಪ್ರ:03/2019–20 ದಿನಾಂಕ :18.06.2019

**ಜ್ಞಾಪನ**

**ವಿಷಯ : 2019–20ನೇ ಸಾಲಿನಲ್ಲಿ ಶೈಕ್ಷಣಿಕ ಹಾಗೂ ಮಕ್ಕಳ ವೃತ್ತಿ ಶಿಕ್ಷಣ ಕಲಿಕೋತ್ಸವವನ್ನು ಜಿಲ್ಲಾ ಹಂತದಲ್ಲಿ ಏರ್ಪಡಿಸುವ ಬಗ್ಗೆ.**

**ಉಲ್ಲೇಖ : ದಿನಾಂಕ: 14/05/2019ರಂದು ಮಾನ್ಯ ನಿರ್ದೇಶಕರು (ಮೈನಾರಿಟಿ)ರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಯನ್ವಯ.**

* * * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ 2019–20ನೇ ಸಾಲಿನ ವಸ್ತು ಪ್ರದರ್ಶನವನ್ನು ಜಿಲ್ಲಾ ಹಂತದಲ್ಲಿ ನವೆಂಬರ್–2019ರ ಎರಡನೇಯ ವಾರದೊಳಗಾಗಿ ಹಾಗೂ ರಾಜ್ಯಮಟ್ಟದ ಕಾರ್ಯಕ್ರಮವನ್ನು ನವೆಂಬರ್–2019ರ ಕೊನೆಯ ವಾರದೊಳಗಾಗಿ ನಡೆಸಲು ಉಲ್ಲೇಖಿತದನ್ವಯ ತೀರ್ಮಾನಿಸಲಾಗಿದೆ. ಅದರಂತೆ ಪೂರ್ವ ಸಿದ್ಧತೆಗಾಗಿ ವೃತ್ತಿ ಶಿಕ್ಷಣ ಶಿಕ್ಷಕರು ಪ್ರೌಢಶಾಲಾ ವೃತ್ತಿ ಶಿಕ್ಷಣ ಪಠ್ಯ ಕ್ರಮಕ್ಕೆ ಪೂರಕವಾಗಿ ವೃತ್ತಿ ಶಿಕ್ಷಣದ ಪ್ರದರ್ಶನಗಳನ್ನು ಪ್ರದರ್ಶಿಸಲು ಅಗತ್ಯವಾದ ಕಚ್ಚಾ ವಸ್ತುಗಳ ಖರೀದಿಗಾಗಿ ಶಾಲಾ ವೃತ್ತಿ ಶಿಕ್ಷಣ ಶುಲ್ಕದ ಹಣದಲ್ಲಿ ವೆಚ್ಚ ಭರಿಸುವುದು.

2019–20ನೇ ಸಾಲಿನ ಶಾಲಾ ಹಂತದ ವಸ್ತು ಪ್ರದರ್ಶನ ಮತ್ತು ಜಿಲ್ಲಾ ಹಂತದ ವಸ್ತು ಪ್ರದರ್ಶನದ ವೆಚ್ಚಗಳಿಗಾಗಿ ಶಾಲೆಯ ಯಾವುದಾದರೂ ಶಾಲಾ ಸಂಚಿತ ನಿಧಿಯಿಂದ ರೂ. 1000/–ಗಳು ಬಿಡುಗಡೆ ಮಾಡಲು ಶಾಲಾ ಮುಖ್ಯಸ್ಥರಿಗೆ ತಿಳಿಸಿದೆ. ರೂ. 1000/–ಗಳನ್ನು ಕ್ರಮವಾಗಿ ಜಿಲ್ಲಾ ಮಟ್ಟಕ್ಕೆ ರೂ. 750/–ಗಳು ಮತ್ತು ರಾಜ್ಯ ಮಟ್ಟಕ್ಕೆ ರೂ. 250/–ಗಳನ್ನು ನಿಯಮಾನುಸಾರ ಬಳಸಲು ತಿಳಿಸಿದೆ. ಸದರಿ ಹಣದಲ್ಲಿ ರೂ. 750/– + ರೂ. 250/–ಗಳನ್ನು ಶಾಲೆಗಳಿಂದ ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಸಂಗ್ರಹಣೆ ಮಾಡುವುದು. ಈ ಹಣದಲ್ಲಿ ಜಿಲ್ಲಾ ಹಂತಕ್ಕೆ ರೂ. 750/–ಗಳನ್ನು ಬಜೆಟ್ ತಯಾರಿಸಿ ಜಿಲ್ಲಾ ಉಪ ನಿರ್ದೇಶಕರ ಮಾರ್ಗದರ್ಶನದಂತೆ ಕಾರ್ಯಕ್ರಮಕ್ಕೆ ವೆಚ್ಚ ಭರಿಸುವುದು. ಅದೇ ರೀತಿ ರಾಜ್ಯ ಮಟ್ಟಕ್ಕೆ ನಿಗಧಿಪಡಿಸಿರುವ ರೂ. 250/–ಗಳನ್ನು ಸಂಗ್ರಹ ಮಾಡಿರುವ ಒಟ್ಟು ಹಣವನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹೆಸರಿನಲ್ಲಿ Corporation Bank , NT Road, Bangalore, ಈ ಉಳಿತಾಯ ಖಾತೆ ಸಂಖ್ಯೆ : 520101267256289, IFSC Code : CORP0000175 ಈ ಖಾತೆಗೆ ಜಮಾ ಮಾಡಲು ಸೂಚಿಸಿದೆ. ಹಾಗೆಯೇ ಈ ವಸ್ತು ಪ್ರದೇಶನದಲ್ಲಿ ಭಾಗವಹಿಸಲು ಬರುವ ಶಾಲೆಯ ಇಬ್ಬರು ಮಕ್ಕಳು ಹಾಗೂ ಒಬ್ಬ ಶಿಕ್ಷಕರಿಗೆ ತಗಲುವ ಕನಿಷ್ಠ ಬಸ್ ಪ್ರಯಾಣ ದರವನ್ನು ಸಹ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸಲು ಸೂಚಿಸಿದೆ. ಜಿಲ್ಲಾ ಹಂತದ ವಸ್ತು ಪ್ರದರ್ಶನವನ್ನು **"ಶೈಕ್ಷಣಿಕ ಹಾಗೂ ಮಕ್ಕಳ ವೃತ್ತಿ ಶಿಕ್ಷಣ ಕಲಿಕೋತ್ಸವ"**ವಾಗಿ ಆಚರಿಸುವುದು. ಇದರಿಂದ ವಿದ್ಯಾರ್ಥಿಗಳಿಗೆ ಸಮಾನತೆ, ಭಾವೈಕ್ಯತೆ, ರಾಷ್ಟ್ರಪ್ರೇಮ, ಶ್ರಮಗೌರವ ಬೆಳೆಸುವ ಮೂಲಕ ಸ್ವಾವಲಂಬನೆ ಹಾಗೂ ಸ್ವಯಂ ಪೂರ್ಣ ಶಿಕ್ಷಣವಾಗಿದ್ದು, ಇದು ಜೀವನ ಮೂಲಕ ಜೀವನಕ್ಕಾಗಿ ಜೀವನ ಪರ್ಯಂತ ನಡೆಯುವ ಶಿಕ್ಷಣವಾಗಿದೆ. ಮಕ್ಕಳ ಈ ಕಲಿಕಾ ಪ್ರಗತಿಯು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ಈ ಕಾರ್ಯಕ್ರಮ ಯಃಶಸ್ವಿಗಾಗಿ ಈ ಕೆಳಕಂಡ ಮಾರ್ಗದರ್ಶನ ಹಾಗೂ ನಿರ್ದೇಶನಗಳ ಅನ್ವಯ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ.

**ವಸ್ತು ಪ್ರದರ್ಶನದ ಬಗ್ಗೆ ಈ ಕೆಳಕಂಡ ಮಾರ್ಗದರ್ಶನವನ್ನು ಅನುಸರಿಸಲು ತಿಳಿಸಿದೆ.**

1. ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ವಿವಿಧ ವೃತ್ತಿ ಶಿಕ್ಷಣ (ಚಿತ್ರಕಲೆ, ಸಂಗೀತ ಶಿಕ್ಷಕರನ್ನು ಹೊರತುಪಡಿಸಿ) ವಿಷಯಗಳ ಪಠ್ಯಕ್ರಮದಂತೆ ತಯಾರಿಸಿದ ಗುಣಮಟ್ಟದ ವಸ್ತುಗಳನ್ನು ಪ್ರದರ್ಶನದಲ್ಲಿಡಲು ಸಂಪೂರ್ಣ ತಯಾರಿಕೆಯನ್ನು ಮಾಡಿಕೊಳ್ಳುವುದು;
2. ಸ್ಥಳೀಯವಾಗಿ ಲಭ್ಯವಿರುವ ಪಠ್ಯ ವಸ್ತುಗಳನ್ನು ಬಳಸಿ ಗುಣಮಟ್ಟದ ವಸ್ತುಗಳನ್ನು ತಯಾರಿಸುವುದು. (ಕೌಶಲ್ಯಗಳನ್ನು ಒಳಗೊಂಡಿರಬೇಕು).
3. ಪ್ರದರ್ಶನದಲ್ಲಿಡುವ ವಸ್ತುಗಳ ಗಾತ್ರ ದೊಡ್ಡದಾಗಿರಬೇಕು ಮತ್ತು ಆಕರ್ಷಣೀಯವಾಗಿರಬೇಕು. (ಚಿಕ್ಕ ಸ್ಯಾಂಪಲ್‌ಗಳಿಗೆ ಅವಕಾಶವಿಲ್ಲ).

4. ಗ್ರಾಮೀಣ ಕುಶಲ ಕೈಗಾರಿಕೆಗೆ ಸಂಬಂಧಿಸಿದಂತೆ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಸಹಕಾರದಿಂದ ಉತ್ತಮ ಗುಣಮಟ್ಟದ ವಿಶೇಷ ವಸ್ತುಗಳನ್ನು ತಯಾರಿಸಿಕೊಳ್ಳುವುದು. (ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ಚಟುವಟಿಕೆಗಳು).
5. ಪಠ್ಯ ವಸ್ತುವಿಗೆ ಪೂರಕವಾಗಿ ವೃತ್ತಿ ಶಿಕ್ಷಣ ಚಟುವಟಿಕೆಗಳನ್ನು ಸಮನ್ವಯಗೊಳಿಸಿ ವೃತ್ತಿ ಬೋಧನೆಗೆ ಸಂಬಂಧಿಸಿದ ಬೋಧನೋಪಕರಣಗಳನ್ನು ತಯಾರಿಸಿಕೊಳ್ಳುವುದು (ವರ್ಕಿಂಗ್ ಮಾಡಲ್ಸ್).
6. ವಿವಿದೋದ್ದೇಶಗಳಿಂದ ಕೂಡಿದ ವಿವಿಧ ಕೌಶಲ್ಯಗಳನ್ನೊಳಗೊಂಡ ಸಮಾಜೋಪಯೋಗಿ ವಸ್ತುಗಳನ್ನು ಪ್ರದರ್ಶನದಲ್ಲಿಡುವುದು.
7. ಜಿಲ್ಲಾ ಹಂತದಲ್ಲಿ ಒಟ್ಟಾರೆ ಭಾಗವಹಿಸಿದ ವೃತ್ತಿ ಶಿಕ್ಷಣದ ಪ್ರತಿ ವೃತ್ತಿ ಶಿಕ್ಷಣಕ್ಕೊಂದರಂತೆ ಪ್ರಥಮ ಸ್ಥಾನ, ದ್ವಿತೀಯ ಸ್ಥಾನ ಹಾಗೂ ತೃತೀಯ ಸ್ಥಾನ ಪಡೆದ ಶಾಲೆಗಳಿಗೆ ಬಹುಮಾನ ನೀಡುವುದು ಹಾಗೂ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರ ನೀಡಿ ಪ್ರೋತ್ಸಾಹಿಸುವುದು.
8. ಜಿಲ್ಲಾ ಮಟ್ಟದಲ್ಲಿ ಪ್ರತಿ ವೃತ್ತಿ ಶಿಕ್ಷಣದಲ್ಲಿ ಪ್ರಥಮ ಸ್ಥಾನ ಪಡೆದ ಶಾಲೆಗಳು ರಾಜ್ಯ ಮಟ್ಟದ ವಸ್ತು ಪ್ರದರ್ಶನಕ್ಕೆ ಕಡ್ಡಾಯವಾಗಿ ಹಾಜರಾಗಬೇಕು. ರಾಜ್ಯಮಟ್ಟದ ವಸ್ತುಪ್ರದರ್ಶನ ದಿನಾಂಕ ನಿಗದಿಗೊಳಿಸಿ ಮುಂದೆ ತಿಳಿಸಲಾಗುವುದು. (ಜಿಲ್ಲಾ ಮಟ್ಟದಲ್ಲಿ ಪ್ರತಿ ವೃತ್ತಿ ಶಿಕ್ಷಣದಲ್ಲಿ ಕನಿಷ್ಠ ಮೂರು ಶಾಲೆಗಳು ಭಾಗವಹಿಸಬೇಕು).
9. **ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ವೃತ್ತಿ ಶಿಕ್ಷಕರಿಗೆ ಓ.ಓ.ಡಿ., ಸೌಲಭ್ಯ ನೀಡಲು ಉಪ ನಿರ್ದೇಶಕರು (ಆಡಳಿತ) ಇವರು ಕ್ರಮ ಕೈಗೊಳ್ಳುವುದು.**
10. ಜಿಲ್ಲಾ ಹಂತದಲ್ಲಿ ವಸ್ತು ಪ್ರದರ್ಶನಕ್ಕೆ ಹಾಜರಾಗುವ ತೋಟಗಾರಿಕೆ, ವ್ಯವಸಾಯ, ಹೊಲಿಗೆ, ರೇಷ್ಮೆ, ಬಡಗಿತನ, ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ ಈ ವಿಷಯಗಳ ವೃತ್ತಿ ಶಿಕ್ಷಕರನ್ನು ಬಿಡುಗಡೆಗೊಳಿಸಿ, ವಸ್ತುಪ್ರದರ್ಶನಕ್ಕೆ ಹಾಜರಾಗುವಂತೆ ಕ್ರಮ ಕೈಗೊಳ್ಳಲು ಆಯಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಮತ್ತು ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
11. 2019–20ನೇ ಸಾಲಿನ ವೃತ್ತಿ ಶಿಕ್ಷಣ ಜಿಲ್ಲಾ ವಸ್ತು ಪ್ರದರ್ಶನದ ಪ್ರಕ್ರಿಯೆಯನ್ನು ನವೆಂಬರ್–2019ರೊಳಗಾಗಿ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸುವುದು.

2019–20ನೇ ಸಾಲಿನ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನದ ಬಗ್ಗೆ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ವೃತ್ತಿ ಶಿಕ್ಷಣ ವಿಷಯ ಪರಿವೀಕ್ಷಕರು, ಜಿಲ್ಲಾ ಉಪ ನಿರ್ದೇಶಕರು (ಆಡಳಿತ), ಇವರ ನಿರ್ದೇಶನದಂತೆ ಕಾರ್ಯ ನಿರ್ವಹಿಸುವುದು.

ನಿರ್ದೇಶಕರು (ಮೈನಾರಿಟಿ)

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ :–

1) ಅಪರ ಆಯುಕ್ತರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ.
3) ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗ.
4) ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ), ಇವರ ಅಗತ್ಯ ಕ್ರಮಕ್ಕಾಗಿ.
5) ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6) ಹಿರಿಯ ಸಹಾಯಕ ನಿರ್ದೇಶಕರು, ವೃತ್ತಿ ಶಿಕ್ಷಣ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
8) ಮಾಹಿತಿ ಅಧಿಕಾರಿಗಳು, ಮಾಹಿತಿ ಕೇಂದ್ರ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9) ಆಪ್ತ ಸಹಾಯಕರು, ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
10) ಸಂಬಂಧಿಸಿದ ಜಿಲ್ಲಾ ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ).
11) ಕಛೇರಿ ಪ್ರತಿ.